(ಸಾಕ್ಷಿಯನ್ನು ದಿನಾಂಕ: 22.04.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್.ಹೆಚ್.ಎನ್., ಪ್ರತಿವಾದಿಗಳ ಪರ ವಕೀಲರಿಂದಃ**

ದಿನಾಂಕಃ 14.02.2024 ರಂದು ನಾನು ಪಾಟೀ ಸವಾಲಿನಲ್ಲಿ ಜಿ.ಪಿ.ಎ ಬರೆದುಕೊಡುವ ಎರಡು ವರ್ಷಗಳ ಪೂರ್ವದಲ್ಲಿ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದು ನುಡಿದಿದ್ದು, ಸದರಿ ಕ್ರಯದ ಕರಾರು ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೀರಾ ಎಂದರೆ ನನ್ನ ಬಳಿ ಕ್ರಯದ ಕರಾರು ಪತ್ರದ ಪ್ರತಿ ಮಾತ್ರವಿದ್ದು, ಮೂಲ ದಾಖಲೆ 1 ನೇ ಪ್ರತಿವಾದಿಯ ಬಳಿ ಇರುತ್ತದೆ ಎಂದು ನುಡಿಯುತ್ತೇನೆ. ದಾವಾ ಸ್ವತ್ತಿನ ಮೇಲೆ ಇದ್ದ ಹತ್ತು ಲಕ್ಷ ರೂಪಾಯಿ ಸಾಲವನ್ನು ನಾನು ತೀರುವಳಿ ಮಾಡಿರುವುದಾಗಿ ಹೇಳಿದ್ದು, ಈ ಬಗ್ಗೆ ನ್ಯಾಯಾಲಯದಲ್ಲಿ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಈ ಬಗ್ಗೆ ವಿಭಾಗ ಪತ್ರವಿರುತ್ತದೆ ಎಂದು ನುಡಿಯುತ್ತೇನೆ. ಸದರಿ ವಿಭಾಗ ಪತ್ರವನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಸ್ವತಹ ಮುಂದುವರೆದು ಮೂಲ ವಿಭಾಗ ಪತ್ರವನ್ನು ನನ್ನ ಅಣ್ಣ ಮೃತ ಚಂದ್ರಶೇಖರ್ ರವರು ಬ್ಯಾಂಕಿನಲ್ಲಿ ಇಟ್ಟಿರುತ್ತಾರೆಂದು ನುಡಿಯುತ್ತಾರೆ. ವಿಭಾಗ ಪತ್ರದ ಒಕ್ಕಣೆಯಂತೆ ಪ್ರತಿವಾದಿಗೆ ಒಂದು ಲಕ್ಷ ರೂಪಾಯಿ ಸಂದಾಯ ಮಾಡಿದ್ದೀರಾ ಎಂದರೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತೇನೆ. ನಾನು ದಾವಾ ಸ್ವತ್ತುಗಳ ಮಾಲೀಕನಾಗಿರುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲದಿದ್ದರೂ ಸಹ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲಿರುವ ಎಲ್ಲಾ ಋಣಭಾರಗಳನ್ನು ಪ್ರತಿವಾದಿಯೇ ಸಂದಾಯ ಮಾಡಿರುವ ಕಾರಣ ಪ್ರತಿವಾದಿಯೇ ದಾವಾ ಸ್ವತ್ತುಗಳು ಮಾಲೀಕರಾಗಿದ್ದು, ಸದರಿಯವರೇ ದಾವಾ ಸ್ವತ್ತುಗಳ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ವಿಭಾಗ ಪತ್ರ ಆದ ಸಮಯದಿಂದ ನಾನೇ ಸ್ವಾಧೀನದಲ್ಲಿರುತ್ತೇನೆ ಎಂದು ನುಡಿಯುತ್ತೇನೆ. ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರ ಮತ್ತು ಜಿ.ಪಿ.ಎ ಬರೆದುಕೊಟ್ಟ

ಸಮಯದಿಂದ ಇಲ್ಲಿಯವರೆವಿಗೂ ಪ್ರತಿವಾದಿಯೇ ದಾವಾ ಸ್ವತ್ತುಗಳ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ.

ದಿನಾಂಕಃ 01.07.2016 ರಂದು ಪ್ರತಿವಾದಿ ನನಗೆ ದೊಣ್ಣೆಯಿಂದ ಹಲ್ಲೆ ಮಾಡಿರುವುದಾಗಿ ದೂರು ನೀಡಿದ್ದರೂ ಕೂಡ ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರ ಮತ್ತು ಜಿ.ಪಿ.ಎ ಏಕೆ ಬರೆದುಕೊಟ್ಟಿದ್ದೀರಾ ಎಂದರೆ ಮೇಲಿನಂತೆ ದೂರು ನೀಡಿದ ನಂತರ ನನ್ನ ಮತ್ತು ಪ್ರತಿವಾದಿಯ ನಡುವೆ ಮಾತುಕತೆ ಹಾಗೂ ಪತ್ರ ವ್ಯವಹಾರವಾಗಿದ್ದು, ಮಾತುಕತೆಯಲ್ಲಿ ಜಿ.ಪಿ.ಎ ಬರೆದುಕೊಡುವ ಎರಡು ವರ್ಷಗಳ ಪೂರ್ವದಲ್ಲಿ ಅಂದರೆ 2014 ರಲ್ಲಿ ಬರೆದುಕೊಟ್ಟ ಕ್ರಯದ ಕರಾರು ಪತ್ರವನ್ನು ರದ್ದುಪಡಿಸಿಕೊಡುತ್ತೇನೆಂದು ಮತ್ತು ಮೂರು ಸರ್ವೆ ನಂಬರ್ ಖಾತೆಯನ್ನು ನನ್ನ ಹೆಸರಿಗೆ ಮಾಡಿಕೊಡುವುದಾಗಿ 1 ನೇ ಪ್ರತಿವಾದಿ ಹೇಳಿದ್ದರಿಂದ ನಾನು ಪ್ರತಿವಾದಿಗೆ ಜಿ.ಪಿ.ಎ ಅನ್ನು ಬರೆದುಕೊಟ್ಟಿರುತ್ತೇನೆ ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಹ ಮುಂದುವರೆದು, ಹಕ್ಕು ಖುಲಾಸೆ ಪತ್ರವನ್ನು ಸಹ 1 ನೇ ಪ್ರತಿವಾದಿ ನನಗೆ ಬರೆದುಕೊಡುತ್ತೇನೆ ಎಂದು ಹೇಳಿದ್ದರಿಂದ ನಾನು ಓದದೇ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ಮೇಲಿನಂತೆ ಯಾವುದೇ ಆಶ್ವಾಸನೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಮಯದ ಅಭಾವವಿರುತ್ತದೆ ಎಂದು 1 ನೇ ಪ್ರತಿವಾದಿ ನನಗೆ ಹೇಳಿದ್ದರಿಂದ ನಾನು ಹಕ್ಕು ಖುಲಾಸೆ ಪತ್ರಕ್ಕೆ ಓದದೆ ಸಹಿ ಮಾಡಿರುತ್ತೇನೆ.

ರೂಪರಾಘವೇಂದ್ರರವರಿಗೆ ನಾನು ಕ್ರಯ ಮಾಡಿರುತ್ತೇನೆ ಎಂದು ದಿನಾಂಕಃ 14.02.2024 ರ ಪಾಟೀ ಸವಾಲಿನಲ್ಲಿ ನುಡಿದಿದ್ದು, ಸದರಿ ರೂಪರಾಘವೇಂದ್ರರವರಿಗೆ ಬರೆದುಕೊಟ್ಟಂತಹ ಕ್ರಯಪತ್ರವನ್ನು ನೀವು ರದ್ದು ಮಾಡಿದ್ದೀರಾ ಎಂದರೆ ರದ್ದು ಮಾಡಿರುವುದಿಲ್ಲ ಎಂದು ನುಡಿಯುತ್ತೇನೆ. ನಾನು ಬರೆದುಕೊಟ್ಟಿರುತ್ತೇನೆ ಎಂದು ಹೇಳುವ ಹಕ್ಕು ಖುಲಾಸೆ ಪತ್ರ ಮತ್ತು ಜಿ.ಪಿ.ಎ ಗಳಿಗೆ ಯಾರು ಸಾಕ್ಷಿದಾರರು ಎಂದರೆ

ಸೋಮಶೇಖರ್ ಮತ್ತು ಎನ್.ಎ. ರವೀಂದ್ರರವರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತೇನೆ. ನಾನು ಜಿ.ಪಿ.ಎ ಮತ್ತು ಹಕ್ಕು ಖುಲಾಸೆ ಪತ್ರವನ್ನು ಕಾನೂನುಬದ್ಧವಾಗಿ 1 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದರಿಂದ ದಾವಾ ಸ್ವತ್ತುಗಳ ಮೇಲೆ ನನಗೆ ಯಾವುದೇ ತರನಾದ ಹಕ್ಕು ವ ಸ್ವಾಮ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.